ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:-ಕಾಶಿಇ/ಆಯವ್ಯಯ/ ಸುತ್ತೋಲೆ/ ಸಪ್ರದಕಾ/06/2021-22

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಬೆಂಗಳೂರು, ದಿನಾಂಕ: 13.08.2021

ಇವರಿಗೆ,

ಕಾಲೇಜು ಶಿಕ್ಷಣ ಇಲಾಖೆಯ,ವ್ಯಾಪ್ತಿಯಲ್ಲಿ ಬರುವ

1.ಎಲ್ಲಾ ಪ್ರಾದೇಶಿಕ ಕಛೇರಿಗಳ ಜಂಟಿ ನಿರ್ದೇಶಕರುಗಳಿಗೆ,

2.ಎಲ್ಲಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರುಗಳಿಗೆ,

ಮಾನ್ಯರೆ,

ವಿಷಯ: ಸರ್ಕಾರದ ಸುತ್ತೋಲೆ/ಪತ್ರವನ್ನು ಪರಿಚಲಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ:-ಆಇ:01:ಟಿ.ಎಫ್.ಪಿ 2021 ದಿನಾಂಕ:03.08.2021

2) ಅ.ಸ. ಪತ್ರಸಂಖ್ಯೆ: ಆ ಇ 05 ಮುಭನಿ 2021 ದಿನಾಂಕ 17.05.2021

****

ಮೇಲ್ಕಂಡ ಸರ್ಕಾರದ ಸುತ್ತೋಲೆ/ ಅರೆ ಸರ್ಕಾರಿ ಪತ್ರಗಳನ್ನು ಇಲಾಖೆ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ಬಟವಾಡೆ ಅಧಿಕಾರಿಗಳ ಗಮನಕ್ಕೆ ತರಲಾಗಿದ್ದು, ಅದರಂತೆ ಕ್ರಮವಹಿಸಲು ಸೂಚಿಸಲಾಗಿದೆ.

| ಕ್ರ.ಸಂ | ಸರ್ಕಾರಿ ಆದೇಶ ಸಂಖ್ಯೆ ಮತ್ತು ದಿನಾಂಕ | ವಿಷಯ |
|---|---|---|
| 01 | ಸರ್ಕಾರಿ ಆದೇಶ ಸಂಖ್ಯೆ:-ಆಇ:01:ಟಿ.ಎಫ್.ಪಿ 2021 ದಿನಾಂಕ:03.08.2021 | ಹಿಂದಿನ ಆರ್ಥಿಕ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗ್ಗೆ. |
| 02 | ಅ.ಸ ಪತ್ರ ಸಂಖ್ಯೆ: ಆಇ :05 ಮುಭನಿ:2021 ದಿನಾಂಕ: 17.05.2021 | ರಾಜ್ಯ ಸರ್ಕಾರಿ ನೌಕರರ ಸಾಮಾನ್ಯ ಭವಿಷ್ಯ ನಿಧಿಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮವಹಿಸುವ ಬಗ್ಗೆ |

ತಮ್ಮ ವಿಶ್ವಾಸಿ,

ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ.

ಅಡಕ:

1) ಸರ್ಕಾರಿ ಆದೇಶ ಸಂಖ್ಯೆ:ಆಇ:01:ಟಿ.ಎಫ್.ಪಿ 2021 ದಿನಾಂಕ: 03.08.2021- ಸುತ್ತೋಲೆಯ ಪ್ರತಿ

2) ಅ.ಸ ಪತ್ರ ಸಂಖ್ಯೆ: ಆಇ :05 ಮುಭನಿ:2021 ದಿನಾಂಕ :17.05.2021- ಪತ್ರದ ಪ್ರತಿ

ಪ್ರತಿಯನ್ನು:

1) ಮ್ಯಾನೇಜರ್ / ಅಧೀಕ್ಷಕರು ಹಣ ಮತ್ತು ಪಾವತಿ ವಿಭಾಗ ಕಾ.ಶಿ.ಇ ಕೇಂದ್ರ ಕಛೇರಿ ಬೆಂಗಳೂರು- ಮಾಹಿತಿಗಾಗಿ

2) ಮಾಹಿತಿ ಅಧಿಕಾರಿಗಳು, ಮಾಹಿತಿ & ತಂತ್ರಜ್ಞಾನ ವಿಭಾಗ, ಕಾ.ಶಿ.ಇ ಕೇಂದ್ರ ಕಛೇರಿ, ಬೆಂಗಳೂರು- ಇಲಾಖಾ ವೆಬ್ ಸೈಟ್ ನಲ್ಲಿ ಪ್ರಕಟಿಸಲು.

/114750/2021

ಕರ್ನಾಟಕ ಸರ್ಕಾರ

ಸಂ:ಆಇ 01 ಟಿಎಫ್‌ಪಿ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಧಾನಸೌಧ
ಬೆಂಗಳೂರು, ದಿನಾಂಕ:03-08-2021.

ಸುತ್ತೋಲೆ

ವಿಷಯ:- ಹಿಂದಿನ ಆರ್ಥಿಕ ವರ್ಷದ / ವರ್ಷಗಳ ವೇತನ ಬಾಕಿಯನ್ನು ಸೆಳೆಯಲು ಆರ್ಥಿಕ ಇಲಾಖೆಯ ಸಹಮತಿ ಪಡೆಯುವ ಬಗ್ಗೆ.

*********

ಪ್ರತಿ ಆರ್ಥಿಕ ಸಾಲಿನಲ್ಲಿ ಆಯವ್ಯಯ ಅಂದಾಜುಗಳನ್ನು ಇಲಾಖೆಗಳಿಂದ ಮಂಜೂರಾದ ಹುದ್ದೆಗಳಿಗೆ ದೃಢೀಕರಣ ಪಡೆದು ಹಾಗೂ HRMS ನಿಂದ ಕಾರ್ಯನಿರತ ಹುದ್ದೆಗಳ ವಿವರಗಳನ್ನು ಪಡೆದು ವೇತನ ಅಂದಾಜಿಸಲಾಗುತ್ತಿದೆ.

ಆದರೆ, ವರ್ಷದ ಮಧ್ಯದಲ್ಲಿ ಹುದ್ದೆಗಳು ಭರ್ತಿ ಆಗುವುದರಿಂದ, ನ್ಯಾಯಾಲಯದ ಆದೇಶದಂತೆ ವೇತನ ಹಿಂಬಾಕಿ ನೀಡಬೇಕಾಗುವುದರಿಂದ ಮತ್ತಿತರ ಕಾರಣಗಳಿಂದ, ಪ್ರಸ್ತುತ ವರ್ಷದಲ್ಲಿ ಬಾಕಿ ವೇತನ ಸೆಳೆದಲ್ಲಿ ಈ ವರ್ಷದ ವೇತನ ಸೆಳೆಯಲು ಕೊರತೆಯಾಗುತ್ತದೆ.

ಸರ್ಕಾರದ ಸುತ್ತೋಲೆ ಸಂ:ಆಇ 6 ಬಿಡಿಇ 2019, ದಿ:3.01.2021 ರಲ್ಲಿ ಪ್ರತಿ ಆರ್ಥಿಕ ಸಾಲಿನಲ್ಲಿ ಆ ವರ್ಷದ ವೇತನವನ್ನು ಮುಂದಿನ ಆರ್ಥಿಕ ಸಾಲಿಗೆ ಮುಂದೂಡದೆ, ಅದೇ ಆರ್ಥಿಕ ಸಾಲಿನಲ್ಲಿ ಸೆಳೆಯಲು ತಿಳಿಸಲಾಗಿದೆ. ಆದಾಗ್ಯೂ ಕೆಲವು ಇಲಾಖೆಗಳು ಈ ವರ್ಷ ಒದಗಿಸಿದ ಅನುದಾನದಲ್ಲಿ ಹಿಂದಿನ ಸಾಲುಗಳ ಬಾಕಿ ವೇತನಗಳನ್ನು ಸೆಳೆಯುತ್ತಿರುವುದರಿಂದ ಪ್ರಸ್ತುತ ಆರ್ಥಿಕ ಸಾಲಿನಲ್ಲಿ ವೇತನ ಸೆಳೆಯಲು ಅನುದಾನ ಕೊರತೆಯಾಗುತ್ತಿದೆ.

ಆದುದರಿಂದ, ಎಲ್ಲಾ ಇಲಾಖೆಗಳು ವೇತನಕ್ಕೆ ಸಂಬಂಧಿಸಿದಂತೆ ಬಾಕಿಗಳನ್ನು ಸೆಳೆಯಬೇಕಾದಲ್ಲಿ ಆರ್ಥಿಕ ಇಲಾಖೆಗೆ ವಿವರಣೆ ಹಾಗೂ ಸೂಕ್ತ ಸಮರ್ಥನೆಯೊಂದಿಗೆ ಪ್ರಸ್ತಾವನೆ ಸಲ್ಲಿಸಿ ಆರ್ಥಿಕ ಇಲಾಖೆಯ ನಿರ್ದಿಷ್ಟ ಅನುಮೋದನೆ ಪಡೆದುಕೊಂಡು ಬಾಕಿ ವೇತನಗಳನ್ನು ಸೆಳೆಯತಕ್ಕದೆಂದು ಈ ಮೂಲಕ ತಿಳಿಸಲಾಗಿದೆ. ಇಲ್ಲವಾದಲ್ಲಿ ಖಜಾನೆಯು ಹಿಂದಿನ ವರ್ಷಗಳ ಬಾಕಿ ವೇತನ ಸೆಳೆಯಲು ಅನುವು ಮಾಡತಕ್ಕದ್ದಲ್ಲವೆಂದು ತಿಳಿಸಲಾಗಿದೆ.

Signed by Shobha Ha
Date: 03-08-2021 17:48:48
(ಹೆಚ್.ಎ. ಶೋಭ)
ಸರ್ಕಾರದ ಉಪ ಕಾರ್ಯದರ್ಶಿ(ಆನಿ ಮತ್ತು ಬಿಸಿಸಿ)
ಆರ್ಥಿಕ ಇಲಾಖೆ

ಪ್ರತಿಗಳು:-

1. ಪ್ರಧಾನ ಮಹಾಲೇಖಪಾಲರು, ಲೆಕ್ಕಪತ್ರಗಳು ಮತ್ತು ಹಕ್ಕುಗಳು, ಕರ್ನಾಟಕ, ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5326/5369 ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು(ಲೆಕ್ಕ ತನಿಖೆ-1), ರೆಸಿಡೆನ್ಸಿ ರಸ್ತೆ, ಅಂಚೆ ಪೆಟ್ಟಿಗೆ 5329/5369, ಕರ್ನಾಟಕ ಬೆಂಗಳೂರು.

O/o the Principal Secretary to Governmen
Law Department
E-Office/C No: 2819613
Dated: 2/8/21

ಸರ್ಕಾರದ ಕಾರ್ಯದರ್ಶಿ (ಆಯವ್ಯಯ ಮತ್ತು ಸಂಪನ್ಮೂಲ), ಆರ್ಥಿಕ ಇಲಾಖೆ
SECRETARY TO GOVT. (BUDGET & RESOURCES), FINANCE DEPARTMENT

ಅ.ಸ. ಪತ್ರ ಸಂಖ್ಯೆ: ಆಇ 05 ಮುಭನಿ 2021 ದಿನಾಂಕ:17.05.2021.

ಮಾನ್ಯರೇ,

ರಾಜ್ಯ ಸರ್ಕಾರಿ ನೌಕರರ ಸಾಮಾನ್ಯ ಭವಿಷ್ಯ ನಿಧಿಗೆ ಸಂಬಂಧಿಸಿದಂತೆ The Karnataka General Provident Fund Rules ನ ನಿಯಮ 12(9) ರಲ್ಲಿ ನಿವೃತ್ತಿಯ 6 ತಿಂಗಳ ಮುಂಚಿತವಾಗಿ ಚಂದಾದಾರರಿಂದ ಸಾಮಾನ್ಯ ಭವಿಷ್ಯ ನಿಧಿ ಖಾತೆಗೆ ಹಣವನ್ನು ಜಮೆ ಮಾಡುವುದನ್ನು ನಿಲ್ಲಿಸಿ ಸಂಬಂಧಪಟ್ಟ ನಿಯಂತ್ರಣಾಧಿಕಾರಿಗಳು ಅಂತಿಮ ಹಣ ಹಿಂತೆಗೆಯಲು ಚಂದಾದಾರರಿಂದ ಅರ್ಜಿಗಳನ್ನು ಪಡೆದು ಮಹಾಲೇಖಪಾಲರಿಗೆ ಸಲ್ಲಿಸುವಂತೆ ಸ್ಪಷ್ಟವಾಗಿ ತಿಳಿಸಲಾಗಿದೆ.

ಆದಾಗ್ಯೂ, ಹಲವಾರು ಪ್ರಕರಣಗಳಲ್ಲಿ ಚಂದಾದಾರರ ವಯೋ ನಿವೃತ್ತಿ, ಸ್ವಯಂ ನಿವೃತ್ತಿ ಅಥವಾ ಮರಣದ ಕಾರಣದಿಂದಾಗಿ ಜಿಪಿಎಫ್ ಖಾತೆಗಳು ಮುಕ್ತಾಯಗೊಂಡ ನಂತರವೂ ಸದರಿ ಖಾತೆಗಳಿಗೆ ಮಾಸಿಕ ಚಂದಾದಾರಿಕೆಗಳು ಸ್ವೀಕೃತವಾಗುತ್ತಿರುವುದನ್ನು ಮಹಾಲೇಖಪಾಲರ ಕಛೇರಿಯು ಗಮನಿಸಿ ಸರ್ಕಾರಕ್ಕೆ ಮಾಹಿತಿಯನ್ನು ನೀಡಿರುತ್ತದೆ.

ಇದನ್ನು ಅವಲೋಕಿಸಿದಲ್ಲಿ ಇಂತಹ ಪ್ರಕರಣಗಳಲ್ಲಿ ಸರ್ಕಾರಿ ನೌಕರರು ವಯೋ ನಿವೃತ್ತಿ, ಸ್ವಯಂ ನಿವೃತ್ತಿ ಅಥವಾ ಮರಣದ ನಂತರವೂ ಅವರ ಖಾತೆಗಳಿಗೆ ವೇತನವು ಜಮೆ ಆಗುತ್ತಿರುವುದರಿಂದಲೇ ಅವರ ಜಿಪಿಎಫ್ ಖಾತೆಗಳಿಗೂ ಮಾಸಿಕ ಚಂದಾ ಜಮೆ ಆಗುತ್ತಿರುವುದೆಂದು ಖಚಿತವಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಡಿಡಿಓಗಳ ಅಜಾಗರೂಕತೆಯೇ ಕಾರಣವಾಗಿರುತ್ತದೆ.

ಆದ್ದರಿಂದ, ಇಂತಹ ಅಜಾಗರೂಕತೆಯಿಂದ ಸರ್ಕಾರಕ್ಕೆ ಆಗುವ ಆರ್ಥಿಕ ನಷ್ಟವನ್ನು ತಪ್ಪಿಸಲು ಈ ನಿಟ್ಟಿನಲ್ಲಿ ಜಾಗರೂಕತೆಯಿಂದ ಕಾರ್ಯನಿರ್ವಹಿಸುವುದನ್ನು ಖಾತರಿ ಪಡಿಸಿಕೊಳ್ಳುವಂತೆ ಹಾಗೂ ಇಂತಹ ಪ್ರಕರಣಗಳು ಮರುಕಳಿಸದಂತೆ ಕ್ರಮವಹಿಸಲು ತಮ್ಮ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲ ಡಿ.ಡಿ.ಓ. ರವರಿಗೆ ಸೂಚಿಸಬೇಕೆಂದು ಕೋರುತ್ತೇನೆ.

ಶುಭಾಶಯಗಳೊಂದಿಗೆ,

ತಮ್ಮ ವಿಶ್ವಾಸಿ,

(ಡಾ: ಏಕರೂಪ್ ಕೌರ್)

2/8/21
Sect. K7

JS - Admn-1
DS - Admn-2
US - HRC

ಇವರಿಗೆ:

ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು / ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.

(ವೆಂಕಟೇಶ್ ನಾಯಕ್ ಟಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಕಾನೂನು ಇಲಾಖೆ

2ನೇ ಮಹಡಿ, ವಿಧಾನ ಸೌಧ, ಬೆಂಗಳೂರು – 560 001 2nd Floor, Vidhana Soudha, Bengaluru - 560 001
Phone: 080-22353138 / 22033438 Fax: 080-22280520 e-mail: secybud-fd@karnataka.gov.in